ಅದೇ ಕಾರಣಕ್ಕೆ ಅಷ್ಟು ಹೊತ್ತು ಕೇವಲ ರಕ್ತ ಕಟ್ಟಿ ನಿಂತಿದ್ದ ಆ ನರದ ಒಳಗೆ ರಕ್ತದ ಹರಿವು ಮತ್ತಷ್ಟು ಹೆಚ್ಚಿ, ನರ ಸ್ಫೋಟಗೊಂಡಿತ್ತು. ಮಾವನಿಗೆ ಹಳದಿ ವಾಂತಿಯಾಗಿದ್ದೇ ಅದಕ್ಕೆ. ಮೆದುಳು ತನಗಾದ ಯಾವುದೇ ಆಘಾತವನ್ನು ಪ್ರಕಟಗೊಳಿಸುವುದೇ ಈ ವಾಂತಿಯ ಮೂಲಕ!

ಸತ್ಯವನ್ನು ಅತ್ತೆಯ ಬಾಯಲ್ಲೇ ಹೇಳಿಸಲು ನಾನೊಂದು ಉಪಾಯ ಮಾಡಿದೆ.

"ಆಪರೇಷನ್ ಮಾಡುವುದಕ್ಕೂ ಮುನ್ನ ಡಾಕ್ಟರಿಗೆ ನಾರಾಯಣ ಮಾವನ ಹೊಟ್ಟೆಯಲ್ಲಿ ಉಪ್ಪುನೀರಿನ ಅಂಶವಿರುವುದು ತಿಳಿದುಬಂದಿದೆ. ಅದನ್ನು ಆಂಬುಲೆನ್ಸಿನ ಸಿಬ್ಬಂದಿ ನೀಡಿರಬಹುದೆಂಬ ಗುಮಾನಿ ಎದ್ದಿದೆ. ಸ್ಟ್ರೋಕಾದ ವ್ಯಕ್ತಿಗೆ ಅವೈಜ್ಞಾನಿಕವಾಗಿ ಪ್ರಥಮ ಚಿಕಿತ್ಸೆ ನೀಡಿದ್ದಾರೆನ್ನುವ ಹಿನ್ನೆಲೆಯಲ್ಲಿ ಅವರ ವಿರುದ್ಧ ದೂರು ನೀಡಲು ಮಂದಾರ ನಿರ್ಧರಿಸಿದ್ದಾಳೆ!"

ಹಿಂದೆ ಮುಂದೆ ಯೋಚಿಸದೆ ಹೀಗೆ ಹೇಳಿದ ನನಗೇ ಹೀಗೂ ಒಂದು ದೂರು ನೀಡಲಿಕ್ಕೆ ಸಾಧ್ಯವೇ ಎನ್ನಿಸಿತು. ಈಗಿನ ಆಂಬುಲೆನ್ಸುಗಳಲ್ಲಿ ಆಕ್ಸಿಜನ್ ಕೊಡುವುದೇ ಕಷ್ಟ, ಅಂಥಾದ್ದರಲ್ಲಿ ಉಪ್ಪುನೀರು! ಎಲ್ಲಾದರೂ ಉಂಟೇ? ಆದರೂ ಮೊದಲೇ ಭಯದ ಬೀಜ ಬಿದ್ದಿರುವ ರುಕ್ಮಿಣಿ ಅತ್ತೆಯ ಮನಸ್ಸಿಗೆ ಕೊಂಚ ಬೆದರಿಕೆಯ ನೀರೆರಚಿದರೂ ಸತ್ಯದ ಮೊಳಕೆ ಹೊರಬರುತ್ತದೆ ಎನ್ನಿಸಿದ್ದರಿಂದ ಈ ಸುಳ್ಳನ್ನು ಹೇಳಿಬಿಟ್ಟೆ. ನಾನಂದುಕೊಂಡಂತೆಯೇ ಆಯಿತು. ಇದೇ ಸುಳ್ಳನ್ನು ಸತ್ಯದಷ್ಟು ದಿಟ್ಟವಾಗಿ, ತೀವ್ರವಾಗಿ ಹಾಗೂ ಸಹಜವಾಗಿ ಹೇಳಿದಾಗ ರುಕ್ಮಿಣತ್ತೆಯ ಧೈರ್ಯ ಕರಗಿ ಹೋಯಿತು.

"ನನ್ನನ್ನು ದಯವಿಟ್ಟು ಕ್ಷಮಿಸಿಬಿಡು ಶರತ್. ಭಾವನಿಗೆ ಉಪ್ಪು ನೀರು ಕುಡಿಸಿದ್ದು ನಾನೇ. ಆದರೆ, ಅವರ ಆರೋಗ್ಯ ಹದಗೆಡಲಿ ಅಂತ ಖಂಡಿತಾ ಕೊಡಲಿಲ್ಲ. ನನ್ನ ಗೆಳತಿ ರೇಖಾಗೆ ಬಿಪಿ ಡೌನಾದಾಗ ಹೀಗೇ ಕೈಕಾಲು ತಣ್ಣಗಾಗುತ್ತಿತ್ತು. ಆಗ ಅವಳ ಗಂಡ ಉಪ್ಪು ನೀರು ಕುಡಿಸುತ್ತಿದ್ದರು. ಈಗ ಭಾವನಿಗೂ ಹಾಗೇ ಆಗಿದ್ದು ನೋಡಿ ನಾನೂ ಅದನ್ನೇ ಕುಡಿಸಿದೆ. ಡಾಕ್ಟರು ಹೈ ಬಿಪಿ ಅಂದಿದ್ದು ನನ್ನ ತಲೆಗೇ ಹೋಗಿರಲಿಲ್ಲ. ಉಪ್ಪು ನೀರು ಕುಡಿಸಿದ ಸ್ವಲ್ಪ ಹೊತ್ತಿಗೇ ಭಾವನಿಗೆ ಹಳದಿ ವಾಂತಿಯಾಯ್ತು. ಅದನ್ನು ಗಮನಿಸಿದ ಇವರು ನನಗೆ ಬೈದು ಆಸ್ಪತ್ರೆಗೆ ಕರೆದುಕೊಂಡು ಹೋದಾಗಲೇ ಅರ್ಥವಾಗಿದ್ದು ನಾನು ಮಾಡಿದ್ದು ತಪ್ಪು ಅಂತ. ಅದಾದ ಮೇಲೆ ಭಾವನಿಗೆ ಆರಾಮಾಗಲಿ ಅಂತ ಅದೆಷ್ಟು ದೇವರಿಗೆ ಕೈ ಮುಗಿದೆನೋ ನನಗೇ ಗೊತ್ತಿಲ್ಲ ಶರತ್ತಾ..."

ಗದ್ಗದ ಕಂಠದಲ್ಲಿ ಅಷ್ಟು ಹೇಳಿ ನಿಲ್ಲಿಸಿದ ಅವರು ಮಾತಿನಲ್ಲಿ ಹೇಳದೇ ಹೋದದ್ದನ್ನು ಅವರು ಮುಂದುವರೆಸಿದ ಅಳು ಹೇಳಿತು. ತಪ್ಪು ನಡೆದಿದ್ದು ನಿಜವಾದರೂ ಅದು ಅಚಾತುರ್ಯವೇ ಹೊರತು ದ್ವೇಷದಿಂದಾದದ್ದಲ್ಲ ಎನ್ನುವ ಅಂಶ ನನ್ನೊಳಗೆ ಸಣ್ಣ ಸಮಾಧಾನವನ್ನು ತಂದಿತು. ಅತ್ತೆಗೆ ಸಮಾಧಾನ ಹೇಳಿ ನೇರ ಆಸ್ಪತ್ರೆಗೆ ತೆರಳಿ ಡಾಕ್ಟರಿಗೆ ವಿಷಯ ತಿಳಿಸಿದೆ.

"ಅದಕ್ಕೇ ಶರತ್, ನಾವು ಡಾಕ್ಟರುಗಳು ಬಡಿದುಕೊಳ್ಳುವುದು – ನಲವತ್ತು ದಾಟಿದ ಮೇಲೆ ಆಗಾಗ ಬಿಪಿ, ಶುಗರ್ ಚೆಕ್ ಮಾಡಿಸಿಕೊಳ್ಳಿ, ಅವುಗಳ ಜಾತಕ–ಜಾಯಮಾನಗಳ ಬಗ್ಗೆ ಸ್ವಲ್ಪ ತಿಳಿದುಕೊಳ್ಳಿ, ಯಾವುದು ತಿನ್ನಬೇಕು, ಯಾವುದು ತಿನ್ನಬಾರದು ಅರ್ಥಮಾಡಿಕೊಳ್ಳಿ ಅಂತ. ಆದರೆ, ನಮ್ಮ ಜನರಿಗೆ ಅಪನಂಬಿಕೆಯೇ ಜಾಸ್ತಿ. ಅದು ಅವರ ತಪ್ಪೂ ಅಲ್ಲ ಬಿಡು. ಆದರೆ, ಜನರಲ್ಲಿ ಅವನೊಬ್ಬ ಡಾಕ್ಟ್ರು, ದುಡ್ಡಿಗಾಗಿ ಹೇಳ್ತಾನೆ. ನನ್ನ ಆರೋಗ್ಯದ ಬಗ್ಗೆ ಅವನಿಗೆಂತ ಗೊತ್ತು? ಕಲ್ಲುಬಂಡೆಯ ಥರಾ ಇದ್ದೇನೆ. ನನಗೇನಾಗ್ತದೆ? ಎಂಬ ಅಸಡ್ಡೆಯೇ ಜಾಸ್ತಿ. ಒಂದು ತಿಳಿದುಕೋ ಶರತ್, ಕಾಯಿಲೆ ಉಲ್ಬಣವಾಗುವ ಕ್ಷಣದ ತನಕ ಪ್ರತಿಯೊಬ್ಬ ವ್ಯಕ್ತಿಯೂ ಸದೃಢನೇ. ದೇಹವಿಡೀ ವ್ಯಾಪಿಸಿ ಕುತ್ತಿಗೆಗೆ ಬಂದಾಗಲೇ ಗೊತ್ತಾಗುವುದು ಇದೆಷ್ಟು ದೊಡ್ಡ ಕುತ್ತು ಅಂತ. ಅದಕ್ಕೇ ಇನ್ನಾದರೂ ನಮ್ಮ ಮಂದಿ ಬಿಪಿ, ಶುಗರ್, ಬ್ರೈನ್, ಹಾರ್ಟ್, ಕಿಡ್ನಿಗಳ ಬಗ್ಗೆ, ಅದಕ್ಕೆ ಹೊಂದಿಕೊಂಡ ಆಹಾರ ಕ್ರಮ, ಪ್ರಥಮ ಚಿಕಿತ್ಸೆಗಳ ಬಗ್ಗೆ ಸ್ವಲ್ಪ ತಿಳಿದುಕೊಳ್ಳಬೇಕು. ನಿಮ್ಮ ಮಾವನ ವಿಷಯವನ್ನೇ ತೆಗೆದುಕೊಳ್ಳಿ, ನೆನ್ನೆ